ದಿನಾಂಕ 26-11-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ವಾದಿ ಪರ ಶ್ರೀ ಜಿ ಎಂ ಸಿ ವಕೀಲರಿಂದಃ-

ನಾನು ಪತಿ ತೀರಿಕೊಂಡಿದ್ದಾರೆ. ನನ್ನ ಪತಿ 2000 ರಲ್ಲಿ ತೀರಿಕೊಂಡರು. ನಾನು ವೃತ್ತಿಯಲ್ಲಿ ವಕೀಲೆ ಎಂದರೆ ಸರಿ. ಲಿಖಿತ ಹೇಳಿಕೆ ಬಗ್ಗೆ ಸಂಪೂರ್ಣ ಮಾಹಿತಿ ಇದೆ . ವಾದಿಗಳ ಮುತ್ತಾತ ಚಿಕ್ಕಕರೀಗೌಡ ಅಲಿಯಾಸ್ ಚಿಕ್ಕಮರಿಯಪ್ಪನವರ ಬಗ್ಗೆ ಮಾಹಿತಿ ಇದೆ. ಅವರ ಪತ್ನಿಯ ಹೆಸರು ದೇವಮ್ಮ ಎಂದರೆ ಸರಿ. ಅವರಿಗೆ 4 ಜನ ಗಂಡು ಮಕ್ಕಳು. ಅವರೆಂದರೆ ನಂಜಪ್ಪ, ನಂಜುಡಪ್ಪ, ತಾಯಪ್ಪ ಮತ್ತು ಮೊಗಪ್ಪ. ಚಿಕ್ಕಕರೀಯಪ್ಪನಿಗೆ ಪೆರಮಮ್ಮ ಎಂಬ ಮಗಳು ಇದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಣ್ಣ ತಾಯಮ್ಮ ಎಂಬ ಮಗಳು ಇದ್ದಾರೆ ಎಂದರೆ ಅವರ ಬಗ್ಗೆ ನಮಗೆ ಅಷ್ಟಾಗಿ ಗೊತ್ತಿಲ್ಲ ಹೆಣ್ಣುಮಕ್ಕಳು ಇದ್ದಾರೆ ಎಂದರೆ ಅವರ ಹೆಸರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಸ್ವಇಚ್ಛೆಯಿಂದ ಗಂಡು ಮಕ್ಕಳು ಭಾಗ ಮಾಡಿಕೊಂಡಿದ್ದಾರೆ ಅದು ಮಾತ್ರ ಗೊತ್ತು. ಹೆಣ್ಣು ಮಕ್ಕಳ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಿಕ್ಕಕರಿಯಪ್ಪನವರು 20.06.1952 ರಲ್ಲಿ ತೀರಿಕೊಂಡರು ಎಂದರೆ ಸಾಕ್ಷಿ ನಾನು ಹುಟ್ಟುವ ಮುಂಚೆಯೇ ತೀರಿಕೊಂಡದ್ದರು ಎಂದು ನುಡಿಯುತ್ತಾರೆ. ಚಿಕ್ಕ ಕರಿಯಪ್ಪನವರು ತೀರಿಕೊಂಡ ದಿನಾಂಕ ನನಗೆ ಗೊತ್ತಿಲ್ಲ. ದೇವಮ್ಮರವರು 20.01.1970ರಲ್ಲಿ ತೀರಿಕೊಂಡರು ಎಂದರೆ ಸಾಕ್ಷಿ ಆಗ ನಾನು ಹುಟ್ಟೇ ಇರಲಿಲ್ಲ ಎಂದು ನುಡಿಯುತ್ತಾರೆ.

ನಾನು ಕೇಳಿರುವ ಕೌಂಟರ ಕ್ಲೇಮ್ ಗೆ ನ್ಯಾಯಾಲಯದ ಶುಲ್ಕ ಕಟ್ಟಿಲ್ಲ. ನಾನು ಕೌಂಟರ ಕ್ಲೇಮ್ ಕೇಳಿರುವುದು ನನಗೆ ಗೊತ್ತಿದೆ. ಸರ್ವೆ ನಂ 43/1 ಮೂಲತಃ 10 ಎಕರೆಗಿಂತ ಜಾಸ್ತಿ ಇತ್ತು. ಒಟ್ಟು ವಿಸ್ತೀರ್ಣ 10 ಎಕರೆ 30 ಗುಂಟೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸರ್ವೆ ನಂ 44 ರಲ್ಲಿ 10 ಎಕರೆ 2 ಗುಂಟೆ ಇತ್ತು ಎಂದರೆ ಸರಿ.

ಸರ್ವೆ ನಂ 44 ರಲ್ಲಿ 10 ಎಕರೆ 2 ಗುಂಟೆಯನ್ನು ಚಿಕ್ಕಕರೀಗೌಡರು 15.09.1929 ರಲ್ಲಿ ಮುನನೇಗೌಡ ಮತ್ತು ಸಾಸಲೇಗೌಡರಿಂದ ಖರೀದಿ ಮಾಡಿದ್ದರು ಎಂದರೆ ಸರಿ. ಅದೇ ರೀತಿ ಸರ್ವೆ ನಂ 43 ರಲ್ಲಿ ಚಿಕ್ಕಕರೀಗೌಡರ ಹೆಂಡತಿ ದೇವಮ್ಮ 5 ಎಕರೆ ಯನ್ನು ದಿನಾಂಕ 14.08.1952 ರಲ್ಲಿ ಖರೀದಿ ಮಾಡಿದ್ದರು ಎಂದರೆ ಇರಬಹುದು. ಅದು ಒಟ್ಟು ಕುಟುಂಬದ ಆಸ್ತಿ ಎಂದರೆ ಸಾಕ್ಷಿ ಆವಾಗ ಎಂದು ನುಡಿಯುತ್ತಾರೆ. ಉಳಿಕೆ 5 ಎಕರೆ 30 ಗುಂಟೆ 2 ಕ್ರಯಪತ್ರದ ಅಡಿ ಒಟ್ಟು ಕುಟುಂಬದಿಂದ ಖರೀದಿ ಮಾಡಿದ್ದು ಎಂದರೆ ಸರಿ. 30.06.1955 ರಲ್ಲಿ 2 ಎಕರೆ, 14.07.1955 ರಲ್ಲಿ 3 ಎಕರೆ 30 ಗುಂಟೆ ಖರೀದಿ ಮಾಡಿದ್ದರು ಎಂದರೆ ಸಾಕ್ಷಿ ನಿಖರವಾಗಿ ದಿನಾಂಕ ಗೊತ್ತಿಲ್ಲ ಖರೀದಿ ಮಾಡಿರುವುದು ಸತ್ಯ ಎಂದು ನುಡಿಯುತ್ತಾರೆ.

14.06.1962 ರವರೆ ಒಟ್ಟು ಕುಟುಂಬ ಚಾಲ್ತಿಯಲ್ಲಿತ್ತು ಎಂದರೆ ಸಾಕ್ಷಿ ಇಲ್ಲ 10.01.1975 ರಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 10.01.1975 ರಲ್ಲಿ ವಿಭಾಗ ಮಾಡಿಕೊಂಡರು ಎಂಬುದಕ್ಕೆ ದಾಖಲೆ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ಸರ್ವೆ ನಂ 43 ರಲ್ಲಿ ದೇವಮ್ಮ ರವರು ಖರೀದಿ ಮಾಡಿದ್ದ 3 ಎಕರೆ 30 ಗುಂಟೆ ವಾದಿಯ ತಂದೆ ಮೂಗಪ್ಪನವರು ಹೆಸರಿಗೆ ಭಾಗದಲ್ಲಿ ಬಂತು ಎಂದರೆ ಸಾಕ್ಷಿ ಅದು ಒಟ್ಟು ಕುಟುಂಬದ ಆಸ್ತಿ ಎರಹಳ್ಳಿ ಹೊಲವನ್ನು 4 ಜನ ಗಂಡುಮಕ್ಕಳು ಸಮನಾಗಿ ವಿಭಾಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಂಜಪ್ಪ, ನಂಜುಡಪ್ಪ ತಾಯಪ್ಪ ಮತ್ತು ಮೂಗಪ್ಪರವರಿಗೆ ಸರ್ವೆ ನಂ.43 ಮತ್ತು 44 ರಲ್ಲಿ ಸಮಭಾಗ ಬಂದಿದೆ ಎಂದು ನುಡಿಯುತ್ತಾರೆ. 2 ಜಮೀನಿನ ಒಟ್ಟು ವಿಸ್ತೀರ್ಣ 20 ಎಕರೆ 32 ಗುಂಟೆ ಎಂದರೆ ಸರಿ. 4 ಜನರಲ್ಲಿ ಪ್ರತಿ ಒಬ್ಬರಿಗೂ 4 ಎಕರೆ ಚಿಲ್ಲರೆ ಬಂದಿರಬಹುದು. ಮೂಗಪ್ಪನವರ ಹೆಸರಿಗೆ 3 ಎಕರೆ 30 ಗುಂಟೆ ಬಂದಿದೆ ಎಂದರೆ ಸಾಕ್ಷಿ ಇನ್ನೂ ಜಾಸ್ತಿ ಬಂದಿತ್ತು ಎಂದು ನುಡಿಯುತ್ತಾರೆ. ತಾಯಪ್ಪನವರ ಹೆಸರಿಗೆ 5 ಎಕರೆ 30 ಗುಂಟೆ ಅವರ ಮಗ ನಂಜಪ್ಪನವರ ಹೆಸರಿಗೆ ವಿಭಾಗದ ಮುಖಾಂತರ ಬಂದಿದೆ ಎಂದರೆ ಸಾಕ್ಷಿ ಎಲ್ಲಾ ನಂಜಪ್ಪನಿಗೆ ಬಂದಿಲ್ಲ. ಕರಿಯಪ್ಪ ನವರಿಗೂ ಸಹ ಸ್ವಲ್ಪ ಬಂದಿದೆ ಎಂದು ನುಡಿಯುತ್ತಾರೆ.

ತಾಯಪ್ಪನವರ ಹೆಸರಿಗೆ ಎಷ್ಟು ವಿಸ್ತೀರ್ಣ ಜಮೀನು ಹೊಗಿದೆ ಎಂದರೆ ಸಾಕ್ಷಿ ಅಂದಾಜಿನಲ್ಲಿ 30 ಎಕರೆ ವರೆಗೆ ಇರಬಹುದು ಎಂದು ನುಡಿಯುತ್ತಾರೆ. ತಾಯಪ್ಪನವರು ಮಗ ನಂಜಪ್ಪ 14.03.1997 ರಂದು ಪುಟ್ಟತಾಯಮ್ಮ ರವರಿಗೆ 4 ಎಕರೆ 5 ಗುಂಟೆ ಕ್ರಯಪತ್ರ ಮಾಡುತ್ತಾರೆಂದರೆ ಸಾಕ್ಷಿ ವಿಭಾಗದ ಮೂಲಕ ಜಮೀನನ್ನು ಮಾರಿದ್ದಾರೆ, ಅದೇ ರೀತಿ ಮೊಗಪ್ಪನ ಭಾಗದ ಜಮೀನನ್ನು 2ನೇ ವಾದಿ ಕರಿಯಪ್ಪ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಕರಿಯಪ್ಪ ಮಾರಾಟ ಮಾಡಿರುವ ಜಮೀನಿನ ಕ್ರಯಪತ್ರ ನಿಡಿ 30 ಎಂದರೆ ಸರಿ. ನಂಜಪ್ಪನವರು ಮಾರಾಟ ಮಾಡಿದ ನಂತರ ಸರ್ವೇ ನಂ 43 ರಲ್ಲಿ 1 ಎಕರೆ 25 ಗುಂಟೆ ಮಾತ್ರ ಉಳಿದಿತ್ತು ಎಂದರೆ ಸಾಕ್ಷಿ ನನಗೆ ಅಷ್ಟಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ 43 ರಲ್ಲಿ 1 ಎಕರೆ 25 ಗುಂಟೆ ಕೆಐಎಡಿಬಿಗೆ  ಭೂಸ್ವಾಧೀಗೊಂಡಿದೆ ಎಂದರೆ ಸರಿ. ಸದರಿ ಜಮೀನಿನ ಪರಿಹಾರದ ಹಣದ ವಿಚಾರವಾಗಿ ನಂಜಪ್ಪನವರು ಸರ್ಕಾರವನ್ನು ಮಿಸ್ ಲೀಡ್ ಮಾಡಿದ್ದಾರೆಂದು ಕ್ರಿಮಿನಲ್ ಕೇಸು ದಾಖಲಾಗಿದೆ ಎಂದರೆ ಗೊತ್ತಿಲ್ಲ.

ಸರ್ವೆ ನಂ 43 ರಲ್ಲಿ ಯಾವ ಆಧಾರದ ಮೇಲೆ ಹಕ್ಕು ಘೋಷಣೆ ಡಿಕ್ರಿ ಕೇಳಿದ್ದೀರಿ ಎಂದರೆ ವಾದಿಗಳು ನಮ್ಮ ಭಾಗವನ್ನು ನಿರಾಕರಿಸಿದ್ದಲ್ಲಿ ವಿಭಾಗ ಅಗಿಲ್ಲ ಎನ್ನುವುದಾದರೇ ನಮ್ಮ ತಾತನ ಆಸ್ತಿಯನ್ನು ಅವರು ವಿಭಾಗ ಮಾಡಿಕೊಂಡಿದ್ದಾರೆ, ಖಾತಾ ಬದಲಾವಣೆ ಮಾಡಿಸಿಕೊಂಡಿದ್ದಾರೆ. ಅದಕ್ಕೆ ನಾನು ನಮ್ಮ ಆಸ್ತಿಯನ್ನು ವಾಪಸ್ಸು ಕೊಡಬೇಕೆಂದು ಕೇಳಿದ್ದೇನೆ ಎಂದು ನುಡಿಯುತ್ತಾರೆ. ಈ ರೀತಿ ನಿರ್ದಿಷ್ಟವಾಗಿ ಲಿಖಿತ ಹೇಳಿಕೆಯಲ್ಲಿ ಪ್ರಾರ್ಥನೆ ಇಲ್ಲ ಎಂದರೆ ಸಾಕ್ಷಿ ಲಿಖಿತ ಹೇಳಿಕೆಯಲ್ಲಿ ಅವರು ನಿರಾಕರಿಸಿದ್ದಲ್ಲಿ ಎಂದು ಹೇಳಿದ್ದೇನೆಂದು ನುಡಿಯುತ್ತಾರೆ.  ನಿಡಿ 30 ನ್ನು ನೀವೂ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ನಿಡಿ 30 ರ ಆಸ್ತಿ ವಾದಿಗಳಿಗೆ ಹೋಗಿತ್ತು ಅದಕ್ಕೆ ನಾವು ಪ್ರಶ್ನಿಸಿಲ್ಲ, ವಿಭಾಗವಾಗಿ 10-15 ವರ್ಷದ ನಂತರ ನಮ್ಮ ತಂದೆಯ ಭಾಗದ ಆಸ್ತಿಯನ್ನು ವಾದಿಗಳು ನಮ್ಮ ತಂದೆಯ ಆಸ್ತಿ ಎಂದು ಸುಳ್ಳು ದಾವೆ ಹಾಕಿಕೊಂಡು ಬರುತ್ತಿದ್ದಾರೆಂದು ನುಡಿಯುತ್ತಾರೆ.

ಈ ದಾವೆ ಇರುವುದು ಒಂದೇ ಸರ್ವೆ ನಂ ಗೆ ಎಂದರೆ ಸರಿ. ವಾದಿಗಳು

ನಿಮ್ಮ ಆಸ್ತಿಗೆ ಅವರು ಯಾವತ್ತೂ ಆಸೆ ಪಟ್ಟು ಬಂದಿಲ್ಲ ಎಂದರೆ ಸರಿಯಲ್ಲ.

ಸರ್ವೆ.ನಂ.89 ಮೂಲತಃ ಗವಿಯಪಪ್ಪರವರಿಗೆ ಮುಂಜೂರಾಗಿತ್ತು ಎಂದರೆ ಇರಬಹುದು. ಸರ್ವೆ.ನಂ.89 ರ ಹಳೆ ಸರ್ವೆ.ನಂ. 21/4 ಎಂದರೆ ಸಾಕ್ಷಿ 21 ಎಂದು ಮಾತ್ರ ಗೊತ್ತು 21/4 ಎಂದು ಗೊತ್ತಿಲ್ಲ. ದಾವಾ ಸ್ವತ್ತು ಇರುವುದು ತಾಯಪ್ಪನ ದೊಡ್ಡಿ ಗ್ರಾಮ, ಕೆಂಪಯ್ಯನ ಪಾಳ್ಯ ದಾಖಲೆ ಎಂದರೆ ಸರಿ. ದಾವಾ ಸ್ವತ್ತು 28.12.1956 ರಲ್ಲಿ ಗವಿಯಪ್ಪನವರಿಗೆ ಮಂಜೂರಾಯಿತು ಎಂದರೆ ಸಾಕ್ಷಿ ನಾನು ಹುಟ್ಟುವ ಕಾಲಕ್ಕೆ ಅದು ನಮ್ಮ ಭಾಗಕ್ಕೆ ಬಂದಿತ್ತು ಎಂದು ನುಡಿಯುತ್ತಾರೆ. ಮೌಖಿಕ ವಿಭಾಗವನ್ನು 10.01.1975 ದಾಖಲೆ ಮಾಡಿಕೊಂಡಿದ್ದಾರೆ ಅದರ ಆಧಾರದ ಮೇಲೆ ವಾದಿಗಳು ಸಹ ಖಾತೆ ಮಾಡಿಸಿಕೊಂಡಿದ್ದಾರೆಂದು ಸಾಕ್ಷಿ ಸ್ವಇಚ್ಛೆಯಿಂದ ನುಡಿಯುತ್ತಾರೆ. ಗವಿಯಪ್ಪನವರು ಸದರ ಸ್ವತ್ತಿನಲ್ಲಿ ಎಷ್ಟು ವರ್ಷ ಸ್ವಾ ಧೀನದಲ್ಲಿ ಇದ್ದರು ಎಂದು ನನಗೆ ಗೊತ್ತಿಲ್ಲ. 14.06.1962 ರಲ್ಲಿ ಒಟ್ಟು ಕುಟುಂಬ ಖುಲಾಸೆ ಆಯಿತು ಎಂದರೆ ಸರಿಯಲ್ಲ. 10.03.1969 ರಲ್ಲಿ ವಾದಿಗಳ ತಂದೆ ಮೂಗಪ್ಪನವರು ಗವಿಯಪ್ಪನವರಿಂದ ಸ್ವಯಾರ್ಜಿತ ವಾದಿ ಆಸ್ತಿ ಖರೀದಿ ಮಾಡಿದ್ದಾರೆಂದರೆ ಸಾಕ್ಷಿ ಇಲ್ಲ ಒಟ್ಟು ಕುಟುಂಬದ ಪರವಾಗಿ ಖರೀದಿ ಮಾಡಿದ್ದು ಎಂದು ನುಡಿಯುತ್ತಾರೆ. ಮೌಖಿಕ ವಿಭಾಗ 1975 ರಲ್ಲಿ ಆಗಿದೆ ಅದು ಕೆಲಲವು ಸರ್ವೆ ನಂಬರ ಗಳಿಗೆ ಸಂಬಂಧಪಟ್ಟಂತೆ. ಕೆಲವು ಚಕ್ಕು ಬಂದಿ ಪ್ರಕಾರ ಮಾಡಿಕೊಂಡಿದ್ದಾರೆ ಎಂದು ಸಾಕ್ಷಿ ಸ್ವಇಚ್ಛೆಯಿಂದ ನುಡಿಯುತ್ತಾರೆ. 1975 ರಲ್ಲಿ ಚಿಕ್ಕಕರಿಗೌಡರ ಎಲ್ಲಾ ಗಂಡು ಮಕ್ಕಳು ಜೀವಂತ ಇದ್ದರು ಸಾಕ್ಷಿ ಸ್ವಇಚ್ಛೆಯಿಂದ ವಿಭಾಗ ಪತ್ರಕ್ಕೂ ಸಹ ಸಹಿ ಹಾಕಿದ್ದಾರೆಂದು ನುಡಿಯುತ್ತಾರೆ. 1975 ರಲ್ಲಿ ಯಾವುದೇ ವಿಭಾಗವಾಗಿಲ್ಲ ಅದಕ್ಕೆ ಯಾವುದೇ ಮಕ್ಕಳು ಸಹಿ ಮಾಡಿಲ್ಲ ಅದು ಸೃಷ್ಟಿಸಿರುವ ದಾಖಲೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ವಾದಿಗಳ ತಂದೆ ಸ್ವಯಾರ್ಜಿತವಾಗಿ ಖರೀದಿ ಮಾಡಿದ್ದು ಅದು ವಾದಿಗಳಿಗೆ ಸೇರಿದ್ದು ಎಂದರೆ ಸರಿಯಲ್ಲ. ಸಾಕ್ಷಿ ವಿಭಾಗದಲ್ಲಿ ನಮಗೆ ಬಂದಿದೆ ನನ್ನ ತಾತನ ನಂತರ ನನ್ನ ಮಾವ ಮತ್ತು ನನ್ನ ಹೆಸರಿಗೆ ಇಲ್ಲಿಯ ತನಕ ಖಾತೆ ಬರುತ್ತಿದೆ ಎಂದು ನುಡಿಯುತ್ತಾರೆ. ನಾನು ಖಾತೆಯನ್ನು ಮೋಸದಿಂದ

ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ.ಸಾಕ್ಷಿ ಸ್ವಇಚ್ಛೆಯಿಂದ ವಿಭಾಗವಾದ ಕೂಡಲೇ ಖಾತೆಯಾಗಿದೆ ಎಂದು ನುಡಿಯುತ್ತಾರೆ. 1975 ರಲ್ಲಿ ವಿಭಾಗ ಆಗಿತ್ತು ಎಂದು ತೋರಿಸಲು ಯಾವ ಮ್ಯುಟೇಷನ್ ಇಲ್ಲ ಎಂದರೆ ಸಾಕ್ಷಿ ನಿರ್ದಿಷ್ಟ ವಾಗಿ ಚಿಕ್ಕಕರಿಯಪ್ಪನ 4 ಜನ ಮಕ್ಕಳಲ್ಲಿ ಯಾರಿಗೂ ಸಹ ಆ ಸಂಬಂಧ ಖಾತೆ ಯಾಗಿಲ್ಲ ಎಂದು ನುಡಿಯುತ್ತಾರೆ. 1975 ರಲ್ಲಿ ಯಾವುದೇ ಭಾಗ ಆಗಿಲ್ಲ, ಅದ್ದರಿಂದ ಖಾತೆಯಾಗಿಲ್ಲ ಎಂದರೆ ಸರಿಯಲ್ಲ. ಚಿಕ್ಕಕರಿಗೌಡರಿಗೆ ಎಷ್ಟು ಜಮೀನು ಇತ್ತು ಎಂದರೆ 60 ಎಕರೆ ಇರಬಹುದು. 14.06.1962 ರವರೆ ಒಟ್ಟು ಕುಟುಂಬದಿಂದ ಕಸುಮಾರು 40 ಎಕರೆ ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ ಎಕೆಂದರೆ ನಾನು ಹೆಟ್ಟೇ ಇರಲಿಲ್ಲ.

<u>**ಪಾಟೀ ಸವಾಲುಃ**</u> ಸಮಯವಕಾಶದ ಅಭಾಬದಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.